**VIJAYA KARNATAKA**

ವಿಜಯ ಕರ್ನಾಟಕ
NAMMA UDUPI
04 SEP 2026

# ಮಣಿಪಾಲ ಕೆಎಂಸಿಯಲ್ಲಿ ವಿಂಗ್ಸ್ ಆಫ್ ಹೋಪ್

## ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳ ಸಂಭ್ರಮ




'ವಿಂಗ್ಸ್ ಆಫ್ ಹೋಪ್' ಎಂಬ ವಿಶೇಷ ಕಾರ್ಯಕ್ರಮ ಹಾವಂಜೆಯಲ್ಲಿರುವ ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್‌ನ ಸಭಾಂಗಣದಲ್ಲಿ ನಡೆಯಿತು.

■ **ವಿಕ ಸುದ್ದಿಲೋಕ** ಉಡುಪಿ

ಬಾಲ್ಯ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಮಣಿಪಾಲದ ಕೆಎಂಸಿ ಆಸ್ಪತ್ರೆ, ಮಕ್ಕಳ ಕ್ಯಾನ್ಸರ್ ವಿಭಾಗದ ವತಿಯಿಂದ 'ವಿಂಗ್ಸ್ ಆಫ್ ಹೋಪ್' ಎಂಬ ವಿಶೇಷ ಕಾರ್ಯಕ್ರಮ ಹಾವಂಜೆಯಲ್ಲಿರುವ ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್‌ನ ಸಭಾಂಗಣದಲ್ಲಿ ನಡೆಯಿತು.

ಭರವಸೆ, ಶಕ್ತಿ ಮತ್ತು ನಗು ಎಂಬ ಸಂದೇಶದೊಂದಿಗೆ ರೂಪಿಸಲಾದ ಈ ಕಾರ್ಯಕ್ರಮದಲ್ಲಿ ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಸುಮಾರು 65 ಮಕ್ಕಳು ಹಾಗೂ ಅವರ ಪೋಷಕರು ಭಾಗವಹಿಸಿದ್ದರು. ಬಾಲ್ಯ ಕ್ಯಾನ್ಸರ್ ಜಾಗೃತಿಯ ಸಂಕೇತವಾದ ಚಿನ್ನದ ರಿಬ್ಬನ್ ಈ ಸಂದರ್ಭಕ್ಕೆ ವಿಶೇಷ ಮೆರುಗು ನೀಡಿತು. ರೋಗವನ್ನು ಎದುರಿಸಿ ಗೆದ್ದ ಈ ಪುಟ್ಟ ಧೀರ ಮಕ್ಕಳನ್ನು ಗೌರವಿಸಲಾಯಿತು.

ರಂಗಭೂಮಿ ಹಾಗೂ ಚಲನಚಿತ್ರ ನಟಿ ರೂಪಶ್ರೀ ವರ್ಕಾಡಿ ಅವರನ್ನು ಸನ್ಮಾನಿಸಲಾಯಿತು. ಗುಣಮುಖರಾದ ಮಕ್ಕಳು ಮತ್ತು ಅವರ ಕುಟುಂಬಗಳೊಂದಿಗೆ ರೂಪಶ್ರೀ ಆತ್ಮೀಯವಾಗಿ ಬೆರೆತರು. ಗುಣಮುಖರಾದ ಐಶ್ವರ್ಯ ಹಾಗೂ ಗುಣಮುಖ ಮಗುವಿನ ತಾಯಿ ಶ್ವೇತಾ ಕೃತಜ್ಞತೆ ಸಲ್ಲಿಸಿದರು.

ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಸುಧಾಕರ್ ಕಂಟಿಪುಡಿ ಅಧ್ಯಕ್ಷತೆ ವಹಿಸಿದ್ದರು. ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್‌ನ ನಿರ್ದೇಶಕ ಹಾಗೂ ಪ್ಯಾಲಿಯೇಟಿವ್ ಮೆಡಿಸಿನ್ ಸಲಹೆಗಾರ್ತಿ ಡಾ.ಸೀಮಾ ರಾಜೇಶ್ ರಾವ್, ಮಕ್ಕಳ ಕ್ಯಾನ್ಸರ್ ವಿಭಾಗದ ಪ್ರಾಧ್ಯಾಪಕ ಡಾ. ವಾಸುದೇವ ಭಟ್ ಕೆ., ಮಕ್ಕಳ ಕ್ಯಾನ್ಸರ್ ವಿಭಾಗದ ಆಫ್ಟರ್ ಕಂಪ್ಲೀಷನ್ ಆಫ್ ಥೆರಪಿ ಕ್ಲಿನಿಕ್‌ನ ಇನ್‌ಚಾರ್ಜ್ ಡಾ.ಎಮಿನ್ ಎ. ರಹಿಮಾನ್ ಉಪಸ್ಥಿತರಿದ್ದರು.

ಮಕ್ಕಳ ಕ್ಯಾನ್ಸರ್ ವಿಭಾಗದ ಡಾ. ಅರ್ಚನಾ ಸ್ವಾಗತಿಸಿದರು. ಡಾ.ಸ್ವಾತಿ ವಂದಿಸಿದರು. ಡಾ.ಚೈತ್ರಾ ವೆಂಕಟೇಶ್ ಕಾರ್ಯಕ್ರಮ ನಿರೂಪಿಸಿದರು.

**UDAYAVANI**

ಉದಯವಾಣಿ

## ವಿಂಗ್ಸ್ ಆಫ್ ಹೋಪ್

# ಕಸ್ತೂರ್ಬಾ ಆಸ್ಪತ್ರೆ ಸೇವೆ ಶ್ಲಾಘನೀಯ: ರೂಪಶ್ರೀ ವರ್ಕಾಡಿ




ಮಣಿಪಾಲ, ಸೆ. 3: ಬಾಲ್ಯ ಕ್ಯಾನ್ಸರ್ ಜಾಗೃತಿ ಮಾಸ ಆಚರಣೆ ಪ್ರಯುಕ್ತ ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಮಕ್ಕಳ ಕ್ಯಾನ್ಸರ್‌ವಿಭಾಗದಿಂದ 'ವಿಂಗ್ಸ್ ಆಫ್ ಹೋಪ್' ಎಂಬ ವಿಶೇಷ ಕಾರ್ಯಕ್ರಮವು ಹಾವಂಜೆಯ ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್‌ನ ಸಭಾಂಗಣದಲ್ಲಿ ಜರಗಿತು.

'ಭರವಸೆ, ಶಕ್ತಿ ಮತ್ತು ನಗು' ಎಂಬ ಸಂದೇಶದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ 65 ಮಕ್ಕಳು ಹಾಗೂ ಅವರ ಪೋಷಕರು ಭಾಗವಹಿಸಿದ್ದರು. ಬಾಲ್ಯ ಕ್ಯಾನ್ಸರ್ ಜಾಗೃತಿಯ ಸಂಕೇತವಾದ ಚಿನ್ನದ ರಿಬ್ಬನ್ ವಿಶೇಷ ಮೆರುಗು ನೀಡಿತು. ರೋಗ ಎದುರಿಸಿ ಗೆದ್ದ ಮಕ್ಕಳನ್ನು ಗೌರವಿಸಲಾಯಿತು.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತೆ ರೂಪಶ್ರೀ ವರ್ಕಾಡಿ ಮಾತನಾಡಿ, ಕ್ಯಾನ್ಸರ್‌ವಿರುದ್ಧ ಹೋರಾಡುತ್ತಿರುವ ಮಕ್ಕಳ ಆರೈಕೆಯಲ್ಲಿ ಕೆಎಂಸಿ ಕಾರ್ಯ ಶ್ಲಾಘನೀಯ ಎಂದರು.

ವೈದ್ಯರು, ದಾದಿಯರು, ಆರೈಕೆದಾರರ ಅವಿಶ್ರಾಂತ ಆರೈಕೆಯಿಂದಾಗಿ ನಮ್ಮ ಮಕ್ಕಳು ನಗುತ್ತಿದ್ದಾರೆ ಎಂದು ಕ್ಯಾನ್ಸರ್‌ನಿಂದ ಗುಣಮುಖವಾದ ಮಗುವಿನ ತಾಯಿ ಶ್ವೇತಾ ಹೇಳಿದರು.

ಮಾಹೆ ಬೋಧನ ಆಸ್ಪತ್ರೆಗಳ ಸಿಒಒ ಡಾ| ಸುಧಾಕರ್‌ಕಂಟಿಪುಡಿ ಅಧ್ಯಕ್ಷತೆ ವಹಿಸಿ, 'ವಿಂಗ್ಸ್ ಆಫ್ ಹೋಪ್' ಎಂಬುದು ಪ್ರತಿ ಕುಟುಂಬಕ್ಕೂ 'ನೀವು ಈ ಪಯಣದಲ್ಲಿ ಒಂಟಿಯಲ್ಲ' ಎಂಬುದನ್ನು ನೆನಪಿಸುವ ಪ್ರಯತ್ನ ಎಂದರು.

ಸೆಂಟರ್ ನ ನಿರ್ದೇಶಕಿ ಡಾ| ಸೀಮಾ ರಾಜೇಶ್ ರಾವ್, ಮಕ್ಕಳ ಕ್ಯಾನ್ಸರ್ ವಿಭಾಗದ ಡಾ| ವಾಸುದೇವ ಭಟ್ ಕೆ., ವಿಭಾಗದ 'ಆಫ್ಟರ್‌ಕಂಪ್ಲೀಷನ್ ಆಫ್ ಥೆರಪಿ' ಕ್ಲಿನಿಕ್ ಇನ್‌ಚಾರ್ಜ್ ಡಾ| ಎಮಿನ್ ಎ. ರಹಿಮಾನ್ ಮತ್ತಿತರರು ಇದ್ದರು. ಮಕ್ಕಳಿಗಾಗಿ ವಿಶೇಷ ಚಟುವಟಿಕೆ ನಡೆಯಿತು. ಮಕ್ಕಳ ಕ್ಯಾನ್ಸರ್‌ವಿಭಾಗದ ಡಾ| ಅರ್ಚನಾ ಸ್ವಾಗತಿಸಿ, ಡಾ| ಸ್ವಾತಿ ವಂದಿಸಿ, ಡಾ| ಚೈತ್ರಾ ವೆಂಕಟೇಶ್ ನಿರೂಪಿಸಿದರು.

**SAMYUKTHA KARNATAKA**

ಸಂಯುಕ್ತ ಕರ್ನಾಟಕ

# ಬಾಲ್ಯ ಕ್ಯಾನ್ಸರ್ ಗೆದ್ದ ಮಕ್ಕಳಿಗೆ 'ವಿಂಗ್ಸ್ ಆಫ್ ಹೋಪ್'

**ಸಂ.ಕ.ಸಮಾಚಾರ, ಉಡುಪಿ**

ಬಾಲ್ಯ ಕ್ಯಾನ್ಸರ್ ಜಾಗೃತಿ ಮಾಸ ಅಂಗವಾಗಿ ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಮಕ್ಕಳ ಕ್ಯಾನ್ಸರ್ ವಿಭಾಗದ ವತಿಯಿಂದ 'ವಿಂಗ್ಸ್ ಆಫ್ ಹೋಪ್' ಕಾರ್ಯಕ್ರಮ ನಡೆಯಿತು.

ಹಾವಂಜೆಯ ಮಣಿಪಾಲ ಹಾಸ್ಪೈಸ್ ಅಂಡ್ ರೆಸ್ಪೈಟ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಸುಮಾರು 65 ಮಕ್ಕಳು ಹಾಗೂ ಅವರ ಪೋಷಕರು ಪಾಲ್ಗೊಂಡರು. ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದ ಮಕ್ಕಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತೆ, ನಟಿ ರೂಪಶ್ರೀ ವರ್ಕಾಡಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ಮಕ್ಕಳೊಂದಿಗೆ ಆತ್ಮೀಯವಾಗಿ ಬೆರೆತರು. ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಮಕ್ಕಳ ಚಿಕಿತ್ಸೆ ಮತ್ತು ಆರೈಕೆಯಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಅವರು ಶ್ಲಾಘಿಸಿದರು.

ಮಾಹೆ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಸುಧಾಕರ್ ಕಂಟಿಪುಡಿ ಅಧ್ಯಕ್ಷತೆ ವಹಿಸಿದ್ದರು. ಮಕ್ಕಳಿಗಾಗಿ ಕಥೆ ಹೇಳುವಿಕೆ, ಒರಿಗಾಮಿ, ಸೃಜನಶೀಲ ಬರವಣಿಗೆ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. 'ಸ್ಮೃತಿ ಗೋಡೆ' ಅನಾವರಣ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು. ಡಾ.ಸೀಮಾ ರಾಜೇಶ್ ರಾವ್, ಡಾ.ವಾಸುದೇವ ಭಟ್.ಕೆ., ಡಾ.ಎಮಿನ್, ಎ.ರಹಿಮಾನ್ ಮೊದಲಾದವರಿದ್ದರು.



ವಿಜಯವಾಣಿ

ಶುಕ್ರವಾರ 4 ಸೆಪ್ಟೆಂಬರ್ 2026
4 SEPTEMBER 2026

ಚಿತ್ರನಟಿ ರೂಪಶ್ರೀ ವರ್ಕಾಡಿ ಅಭಿಮತ | ಮಣಿಪಾಲದಲ್ಲಿ ವಿಂಗ್ಸ್ ಆಫ್ ಹೋಪ್ ಕಾರ್ಯಕ್ರಮ ಉದ್ಘಾಟನೆ

# ಆತ್ಮವಿಶ್ವಾಸವೇ ರೋಗಿಗಳಿಗೆ ಕ್ಯಾನ್ಸರ್ ಮಣಿಸುವ ದೊಡ್ಡ ಶಕ್ತಿ

■ ವಿಜಯವಾಣಿ ಸುದ್ದಿಜಾಲ ಉಡುಪಿ

ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವ ಮಕ್ಕಳು ಹಾಗೂ ಅವರ ಪಾಲಕರು ವೈದ್ಯರ ಮೇಲೆ ವಿಶ್ವಾಸವಿಟ್ಟು ಸಹಕರಿಸಬೇಕು. ಗುಣಮುಖರಾದ ಕುಟುಂಬಗಳು ಇನ್ನೂ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಬಳಿ ತೆರಳಿ ಆತ್ಮವಿಶ್ವಾಸ ಹೆಚ್ಚಿಸಬೇಕು. ಅದರಿಂದ ಅವರಿಗೆ ಕ್ಯಾನ್ಸರ್ ವಿರುದ್ಧ ಹೋರಾಡಲು ಶಕ್ತಿ ಲಭಿಸುತ್ತದೆ ಎಂದು ಚಿತ್ರನಟಿ ರೂಪಶ್ರೀ ವರ್ಕಾಡಿ ಹೇಳಿದರು.



ವಿಜಯವಾಣಿ ಚಿತ್ರ

ಮಣಿಪಾಲದಲ್ಲಿ ಕೆಎಂಸಿ ವತಿಯಿಂದ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳು ಮತ್ತು ಅವರ ಪಾಲಕರಿಗಾಗಿ ಆಯೋಜಿಸಿದ್ದ 'ವಿಂಗ್ಸ್ ಆಫ್ ಹೋಪ್' ಕಾರ್ಯಕ್ರಮ ಸ್ಮರಣಾರ್ಥ ರೂಪಶ್ರೀ ವರ್ಕಾಡಿ ಗಿಡ ನೆಟ್ಟರು. ಪ್ರಮುಖರಾದ ಡಾ.ಸುಧಾಕರ್ ಕಂಟಿಪುಡಿ, ಡಾ.ಸೀಮಾ ರಾಜೇಶ್ ರಾವ್, ಡಾ.ವಾಸುದೇವ್ ಭಟ್ ಕೆ., ಡಾ.ಎಮಿನ್ ಎ.ರಹಿಮಾನ್, ಡಾ.ಅರ್ಚನಾ, ಡಾ.ಸ್ವಾತಿ, ಡಾ.ಚೈತ್ರಾ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಮಣಿಪಾಲದಲ್ಲಿರುವ ಹಾಸ್ಪೈಸ್ ಆ್ಯಂಡ್ ರೆಸ್‌ಪೈಸ್ ಸೆಂಟರ್(ಎಂಎಚ್‌ಆರ್‌ಸಿ)ನಲ್ಲಿ ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮಣಿಪಾಲದ ಮಕ್ಕಳ ಕ್ಯಾನ್ಸರ್ ವಿಭಾಗ ವತಿಯಿಂದ ಬಾಲ್ಯ ಕ್ಯಾನ್ಸರ್ ತಡೆ ಜಾಗೃತಿ ಮಾಸದ ನಿಮಿತ್ತ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳು ಮತ್ತು ಅವರ ಪಾಲಕರಿಗಾಗಿ ಆಯೋಜಿಸಿದ್ದ 'ವಿಂಗ್ಸ್ ಆಫ್ ಹೋಪ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕ್ಯಾನ್ಸರ್‌ನಿಂದ ಗುಣಮುಖರಾದ ಐಶ್ವರ್ಯಾ, ತಾಯಿ ಶ್ವೇತಾ ಮಾತನಾಡಿ, ವೈದ್ಯರ ತಂಡಕ್ಕೆ ಕೃತಜ್ಞತೆ ಸಲ್ಲಿಸಲು ನಮ್ಮ ಬಳಿ ಪದಗಳೇ ಇಲ್ಲ. ನಮ್ಮ ಜೀವನದ ಅತ್ಯಂತ ಕಷ್ಟದ ದಿನಗಳಲ್ಲಿ ವೈದ್ಯರು, ದಾದಿಯರು, ಆರೈಕೆದಾರರ ಕರುಣೆ, ಶ್ರಮದಿಂದ ಇಂದು ನಮ್ಮ ಮಕ್ಕಳು ನಗುತ್ತಿದ್ದಾರೆ ಎಂದರು.

ಎಂಎಚ್‌ಆರ್‌ಸಿ ನಿರ್ದೇಶಕಿ ಡಾ.ಸೀಮಾ ರಾಜೇಶ್ ರಾವ್, ಮಕ್ಕಳ ಕ್ಯಾನ್ಸರ್ ವಿಭಾಗ ಮುಖ್ಯಸ್ಥ ಡಾ.ವಾಸುದೇವ್ ಭಟ್ ಕೆ., ವಿಭಾಗದ 'ಆಫ್ಟರ್ ಕಂಪ್ಲೀಷನ್ ಆಫ್ ಥೆರಪಿ' ಕ್ಲಿನಿಕ್ ಮುಖ್ಯಸ್ಥೆ ಡಾ.ಎಮಿನ್ ಎ.ರಹಿಮಾನ್ ಉಪಸ್ಥಿತರಿದ್ದರು. ಮಕ್ಕಳ ಕ್ಯಾನ್ಸರ್ ವಿಭಾಗದ ಡಾ.ಅರ್ಚನಾ ಸ್ವಾಗತಿಸಿದರು. ಡಾ.ಸ್ವಾತಿ ವಂದಿಸಿದರು. ಡಾ.ಚೈತ್ರಾ ವೆಂಕಟೇಶ್ ನಿರೂಪಿಸಿದರು.

> ಕೆಎಂಸಿಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ ಮನೆಗೆ ತೆರಳುವುದು ಮಕ್ಕಳ ಅಸಾಧಾರಣ ಧೈರ್ಯದ ಕಥೆಯಾಗಿದೆ. ಕುಟುಂಬದ ಸಮರ್ಪಣೆ, ನಮ್ಮ ವೈದ್ಯಕೀಯ ತಂಡಗಳ ಅವಿಶ್ರಾಂತ ಬದ್ಧತೆಗೆ 'ವಿಂಗ್ಸ್ ಆಫ್ ಹೋಪ್' ನಿದರ್ಶನ. ಕ್ಯಾನ್ಸರ್ ಪೀಡಿತ ಮಕ್ಕಳ ಪ್ರತಿ ಕುಟುಂಬಕ್ಕೂ 'ನೀವು ಈ ಪಯಣದಲ್ಲಿ ಒಂಟಿಯಲ್ಲ' ಎನ್ನುವ ಭರವಸೆ ನೀಡುವುದು, ಮಕ್ಕಳ ಆರೈಕೆಗೆ ಕರುಣಾಪೂರ್ಣ ಹಾಗೂ ವಿಶ್ವ ದರ್ಜೆಯ ಸೇವೆ ನೀಡುವುದು ನಮ್ಮ ಬದ್ಧತೆಯಾಗಿದೆ.
>
> । ಡಾ.ಸುಧಾಕರ್ ಕಂಟಿಪುಡಿ
> ಮಾಹೆಯ ಬೋಧನಾ ಆಸ್ಪತ್ರೆಗಳ ಸಿಇಒ

## ಗುಣಮುಖರಾದ ಮಕ್ಕಳಿಗೆ ಸನ್ಮಾನ

ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ 65 ಮಕ್ಕಳು ಹಾಗೂ ಅವರ ಪಾಲಕರು ಪಾಲ್ಗೊಂಡಿದ್ದರು. ಜಾಗೃತಿ ಸಂಕೇತವಾಗಿ ಅಳವಡಿಸಿದ್ದ ಚಿನ್ನದ ರಿಬ್ಬನ್ ಗಮನ ಸೆಳೆಯಿತು. ಕಾಯಿಲೆ ಎದುರಿಸಿ ಜೀವಾಪಾಯದಿಂದ ಪಾರಾದ ಮಕ್ಕಳನ್ನು ಸನ್ಮಾನಿಸಲಾಯಿತು. 12 ವರ್ಷದೊಳಗಿನ ಮಕ್ಕಳಿಗೆ ಕಥೆ ಹೇಳುವ ಗೋಷ್ಠಿ ನಡೆಯಿತು. ಪೀಸ್ ಕ್ರೇನ್, 'ಕ್ಯಾನ್ಸರ್ ನಂತರದ ಬದುಕು' ವಿಷಯದ ಬರವಣಿಗೆ, ವಿಚಾರ ಮಂಥನ ಆಯೋಜಿಸಲಾಗಿತ್ತು. 'ನಾಳೆ ರಾಜ ಕೋಳಿ ಮಜಾ' ಚಿತ್ರ ಪ್ರದರ್ಶನ ನಡೆಯಿತು.

DECCAN HERALD
Friday
September 4, 2026

# Childhood Cancer Awareness Month observed

**MANIPAL, DHNS:** A 'Memory Wall' with smiling faces and stories of survivor children with their parents was unveiled during the programme 'Wings of hope', organised to observe the Childhood Cancer awareness month at the auditorium at the Manipal Hospice and Respite Center (MHRC), Havanje, here recently.

The memory wall is a living testament to their resilience and triumph of hope over adversity, emphasised Chief Operating Officer (COO) Teaching Hospitals, MAHE, Dr Sudhakar Kantipudi

"Every child, who walks through our doors and emerges a survivor, is a story of extraordinary courage—the courage of child, devotion of the family and tireless commitment of our clinical teams. 'Wings of Hope' is our way of celebrating these little heroes and reminding every family that they are not alone on this journey. MAHE remains committed to compassionate, world-class care for children with cancer," Dr Kantipudi stressed while addressing the programme organised by the department of Paediatric Oncology, KMC and Hospital.

The programme organised with the objective of spreading hope, strength and smiles witnessed the participation of nearly 65 childhood cancer survivors and their parents.

Actor and National Film award winner Roopashree Vorkady was felicitated during the event.

Aishwarya, a survivor, and Shwetha, the mother of a survivor, expressed gratitude to the entire team of the Department of Paediatric Oncology and the Kasturba Hospital, Manipal. The doctors, nurses, and caregivers stood by us like family through the most difficult days of our lives, they recollected.

THE TIMES OF INDIA, MANGALURU
FRIDAY, SEPTEMBER 4, 2026

# 'Wings of Hope' celebrates child cancer survivors

In a celebration of perseverance and life beyond cancer, the Department of Paediatric Oncology, Kasturba Medical College and Hospital, Manipal, organised a special programme titied 'Wings of Hope' at the auditorium of the Manipal Hospice and Respite Centre (MHRC), Havanje, on Tuesday.
The programme, centred on the themes of hope, strength and smiles, brought together nearly 65 childhood cancer survivors and their parents. The golden ribbon, the universal symbol of childhood cancer awareness, set the tone for the event, which honoured children who had overcome the disease.
Theatre and film actor and National Film Award winner Roopashree Vorkady was felicitated on the occasion.

ಕನ್ನಡಪ್ರಭ
ಶನಿವಾರ 5.09.2026

**ಭರವಸೆ** ರೋಗಿಗಳ ಆರೈಕೆ ಶ್ಲಾಘನೀಯ ಕಾರ್ಯ: ರೂಪಶ್ರೀ ವರ್ಕಾಡಿ

# ಮಣಿಪಾಲ ಕೆಎಂಸಿ ವಿಂಗ್ಸ್ ಆಫ್ ಹೋಪ್: ಕ್ಯಾನ್ಸರ್ ಗೆದ್ದ ಮಕ್ಕಳ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಇಲ್ಲಿನ ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಬಾಲ್ಯ ಕ್ಯಾನ್ಸರ್‌ಜಾಗೃತಿ ಮಾಸಾಚರಣೆ ಅಂಗವಾಗಿ, ಮಕ್ಕಳ ಕ್ಯಾನ್ಸರ್‌ವಿಭಾಗವು ವಿಂಗ್ಸ್ ಆಫ್ ಹೋಪ್ ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಿತು.

ಭರವಸೆ, ಶಕ್ತಿ ಮತ್ತು ನಗು ಎಂಬ ಸಂದೇಶದೊಂದಿಗೆ ಈ ಕಾರ್ಯಕ್ರಮದಲ್ಲಿ ಸುಮಾರು 65 ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಧೀರ ಮಕ್ಕಳನ್ನು ಅವರ ಪೋಷಕರೊಂದಿಗೆ ಗೌರವಿಸಲಾಯಿತು.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತೆ ನಟಿ ರೂಪಶ್ರೀ ವರ್ಕಾಡಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಗುಣಮುಖರಾದ ಮಕ್ಕಳು ಮತ್ತವರ ಕುಟುಂಬಗಳೊಂದಿಗೆ ಆತ್ಮೀಯವಾಗಿ ಬೆರೆತರು, ಕಸ್ತೂರ್ಬಾ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿ ಈ ಪುಟ್ಟ ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಯಲ್ಲಿ ನಿಜಕ್ಕೂ ಶ್ಲಾಘನೀಯ ಕೆಲಸ ಮಾಡುತ್ತಿದ್ದಾರೆ ಎಂದರು.



ಮಣಿಪಾಲ ಕೆಎಂಸಿಯಲ್ಲಿ 'ವಿಂಗ್ಸ್ ಆಫ್ ಹೋಪ್' ಕಾರ್ಯಕ್ರಮ ನಡೆಯಿತು.

ಮಕ್ಕಳ ಪರವಾಗಿ ಐಶ್ವರ್ಯ ಹಾಗೂ ಪೋಷಕರ ಪರವಾಗಿ ಶ್ವೇತಾ ಅವರು ಮಕ್ಕಳ ಕ್ಯಾನ್ಸರ್‌ವಿಭಾಗ ಇಡೀ ತಂಡಕ್ಕೆ ಕೃತಜ್ಞತೆ ಸಲ್ಲಿಸಲು ನಮ್ಮ ಬಳಿ ಪದಗಳೇ ಸಾಲದು ಎಂದರು.

**ಸ್ಮೃತಿ ಗೋಡೆ ಅನಾವರಣ:** ಮಾಹೆ, ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಅಧ್ಯಕ್ಷತೆ ವಹಿಸಿದ್ದರು. ಸ್ಮೃತಿ ಗೋಡೆ ಯನ್ನು ಅನಾವರಣ ಗೊಳಿಸಲಾಯಿತು. ಗುಣಮುಖರಾದ ಮಕ್ಕಳು ತಮ್ಮ ಪೋಷಕರೊಂದಿಗೆ ನಗುಮೊಗದಿಂದಿರುವ ಚಿತ್ರಗಳನ್ನು ಮತ್ತು ಅವರ ಕಥೆಗಳನ್ನು ಈ ಗೋಡೆ ಪ್ರದರ್ಶಿಸಿತು.

ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್‌ನ ನಿರ್ದೇಶಕಿ ಡಾ. ಸೀಮಾ ರಾಜೇಶ್ ರಾವ್, ಮಕ್ಕಳ ಕ್ಯಾನ್ಸರ್‌ವಿಭಾಗದ ಮುಖ್ಯಸ್ಥ ಡಾ. ವಾಸುದೇವ ಭಟ್ ಕೆ., ಮತ್ತು ಮಕ್ಕಳ ಕ್ಯಾನ್ಸರ್‌ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಎಮಿನ್ ಎ. ರಹಿಮಾನ್ ಅವರು ಉಪಸ್ಥಿತರಿದ್ದರು. ಮಕ್ಕಳ ಕ್ಯಾನ್ಸರ್‌ವಿಭಾಗದ ಡಾ. ಅರ್ಚನಾ ಸ್ವಾಗತಿಸಿ, ಡಾ. ಸ್ವಾತಿ ವಂದಿಸಿದರು, ಡಾ. ಚೈತ್ರ ವೆಂಕಟೇಶ್ ನಿರೂಪಿಸಿದರು.

ಭರವಸೆ, ಶಕ್ತಿ ಮತ್ತು ನಗು ಎಂಬ ಸಂದೇಶದೊಂದಿಗೆ ಈ ಕಾರ್ಯಕ್ರಮದಲ್ಲಿ ಸುಮಾರು 65 ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಧೀರ ಮಕ್ಕಳನ್ನು ಅವರ ಪೋಷಕರೊಂದಿಗೆ ಗೌರವಿಸಲಾಯಿತು.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತೆ ನಟಿ ರೂಪಶ್ರೀ ವರ್ಕಾಡಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಗುಣಮುಖರಾದ ಮಕ್ಕಳು ಮತ್ತವರ ಕುಟುಂಬಗಳೊಂದಿಗೆ ಆತ್ಮೀಯವಾಗಿ ಬೆರೆತರು, ಕಸ್ತೂರ್ಬಾ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿ ಈ ಪುಟ್ಟ ಕ್ಯಾನ್ಸರ್‌ರೋಗಿಗಳ ಚಿಕಿತ್ಸೆ ಮತ್ತು ಆರೈಕೆಯಲ್ಲಿ ನಿಜಕ್ಕೂ ಶ್ಲಾಘನೀಯ ಕೆಲಸ ಮಾಡುತ್ತಿದ್ದಾರೆ ಎಂದರು.

**TULUNADU VARTHE**

**LINK:** https://tulunaduvarthe.com/wings-of-hope-kasturba-hospital-manipal-celebrates-children-who-have-recovered-from-childhood-cancer/

# ವಿಂಗ್ಸ್ ಆಫ್ ಹೋಪ್' : ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳನ್ನು ಸಂಭ್ರಮಿಸಿದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ




**ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಮಕ್ಕಳ ಆರೈಕೆಯಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಾಡುತ್ತಿರುವ ಶ್ಲಾಘನೀಯ :ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತ ನಟಿ ರೂಪಶ್ರೀ ವರ್ಕಾಡಿ**

ಮಣಿಪಾಲ : ಬಾಲ್ಯ ಕ್ಯಾನ್ಸರ್ ಜಾಗೃತಿ ಮಾಸವನ್ನು ಆಚರಿಸುವ ಅಂಗವಾಗಿ, ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮಣಿಪಾಲದ ಮಕ್ಕಳ ಕ್ಯಾನ್ಸರ್ ವಿಭಾಗವು 'ವಿಂಗ್ಸ್ ಆಫ್ ಹೋಪ್' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮವು ಮಂಗಳವಾರದಂದು ಮಣಿಪಾಲದ ಹಾವಂಜೆಯಲ್ಲಿರುವ ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್ (MHRC)ನ ಸಭಾಂಗಣದಲ್ಲಿ ನಡೆಯಿತು.

'ಭರವಸೆ, ಶಕ್ತಿ ಮತ್ತು ನಗು' ಎಂಬ ಸಂದೇಶದೊಂದಿಗೆ ರೂಪುಗೊಂಡ ಈ ಕಾರ್ಯಕ್ರಮದಲ್ಲಿ ಸುಮಾರು 65 ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳು ಹಾಗೂ ಅವರ ಪೋಷಕರು ಭಾಗವಹಿಸಿದ್ದರು. ಬಾಲ್ಯ ಕ್ಯಾನ್ಸರ್ ಜಾಗೃತಿಯ ಸಂಕೇತವಾದ ಚಿನ್ನದ ರಿಬ್ಬನ್ ಈ ಸಂದರ್ಭಕ್ಕೆ ವಿಶೇಷ ಮೆರುಗು ನೀಡಿತು; ರೋಗವನ್ನು ಎದುರಿಸಿ ಗೆದ್ದ ಈ ಪುಟ್ಟ ಧೀರ ಮಕ್ಕಳನ್ನು ಗೌರವಿಸಲಾಯಿತು.

ಖ್ಯಾತ ರಂಗಭೂಮಿ ಹಾಗೂ ಚಲನಚಿತ್ರ ನಟಿ, ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತೆ ರೂಪಶ್ರೀ ವರ್ಕಾಡಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟರು. ಗುಣಮುಖರಾದ ಮಕ್ಕಳು ಮತ್ತು ಅವರ ಕುಟುಂಬಗಳೊಂದಿಗೆ ಆತ್ಮೀಯವಾಗಿ ಬೆರೆತ ಅವರು, ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಮಕ್ಕಳ ಆರೈಕೆಯಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಾಡುತ್ತಿರುವ ಶ್ಲಾಘನೀಯ ಕಾರ್ಯವನ್ನು ಪ್ರಶಂಸಿಸಿದರು.

## VIJAYAVANI

**LINK:** https://www.vijayavani.net/category/news/wings-of-hope-special-program-for-children-and-their-parents-who-have-recovered-from-child-cancer-at-kasturba-hospital-manipal-in-udupi

# ಆತ್ಮವಿಶ್ವಾಸವೇ ಕ್ಯಾನ್ಸರ್ ಮಣಿಸುವ ದೊಡ್ಡ ಶಕ್ತಿ



ಉಡುಪಿ ಮಣಿಪಾಲದಲ್ಲಿ ಕೆಎಂಸಿ ವತಿಯಿಂದ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳು ಮತ್ತು ಅವರ ಪಾಲಕರಿಗಾಗಿ ಆಯೋಜಿಸಿದ್ದ 'ವಿಂಗ್ಸ್ ಆಫ್ ಹೋಪ್' ವಿಶೇಷ ಕಾರ್ಯಕ್ರಮದ ಸ್ಮರಣಾರ್ಥ ರೂಪಶ್ರೀ ವರ್ಕಾಡಿ ಗಿಡ ನೆಟ್ಟರು. ಡಾ. ಸುಧಾಕರ್ ಕಂಟಿಪುಡಿ, ಡಾ. ಸೀಮಾ ರಾಜೇಶ್ ರಾವ್, ಡಾ. ವಾಸುದೇವ್ ಭಟ್ ಕೆ., ಡಾ. ಎಮಿನ್ ಎ. ರಹಿಮಾನ್, ಡಾ. ಅರ್ಚನಾ ಹಾಗೂ ಮಕ್ಕಳು ಇದ್ದರು.

### * ಖ್ಯಾತ ರಂಗಭೂಮಿ, ಚಿತ್ರನಟಿ ರೂಪಶ್ರೀ ವರ್ಕಾಡಿ ಅಭಿಮತ

### * ಕೆಎಂಸಿಯಲ್ಲಿ 'ವಿಂಗ್ಸ್ ಆಫ್ ಹೋಪ್' ಕಾರ್ಯಕ್ರಮ ಉದ್ಘಾಟನೆ

*ಕಾರ್ಕಳ,ಆ.25: ಮಣಿಪಾಲ ಆರೋಗ್ಯ ಕಾರ್ಡ್–2026ರ ನೋಂದಣಿಗೆ ಆಗಸ್ಟ್ 31 ಕೊನೆಯ ದಿನವಾಗಿದ್ದು,.ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಮಾರ್ಕೆಟಿಂಗ್ ವಿಭಾಗದ ವ್ಯವಸ್ಥಾಪಕ ಮೋಹನ್ ಶೆಟ್ಟಿ ಹೇಳಿದರು.*

*ಅವರು ಆ.25 ರಂದು ಮಂಗಳವಾರ ಕಾರ್ಕಳ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರಿಗೆ ಆರೋಗ್ಯ ಕಾರ್ಡ್ ವಿತರಿಸಿ ಮಾತನಾಡಿ,ಕಳೆದ 26 ವರ್ಷಗಳಿಂದ ಈ ಯೋಜನೆ ಸಾರ್ವಜನಿಕರಿಗೆ ಆರೋಗ್ಯ ಸೇವೆಯಲ್ಲಿ ನೆರವಾಗುತ್ತಿದ್ದು, ಪ್ರಸ್ತುತ ಸುಮಾರು 6.5 ಲಕ್ಷ ಸದಸ್ಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು.*

*ಮಾಹೆ ಸಮೂಹ ಆಸ್ಪತ್ರೆಗಳಲ್ಲಿ ವಿವಿಧ ಆರೋಗ್ಯ ಸೇವೆಗಳಿಗೆ ರಿಯಾಯಿತಿ ಒದಗಿಸುವ ಈ ಕಾರ್ಡ್ ನೋಂದಣಿಯ ನಂತರ ತಿಂಗಳ 15ನೇ ತಾರೀಖಿನಿಂದ ಜಾರಿಗೆ ಬರಲಿದ್ದು, 2027ರ ಆಗಸ್ಟ್ 15ರವರೆಗೆ ಮಾನ್ಯವಾಗಿರುತ್ತದೆ. ವೈಯಕ್ತಿಕ ಸದಸ್ಯತ್ವಕ್ಕೆ ವಾರ್ಷಿಕ ₹350, ಕೌಟುಂಬಿಕ ಸದಸ್ಯತ್ವಕ್ಕೆ ₹700 ಹಾಗೂ ಕೌಟುಂಬಿಕ ಪ್ಲಸ್ ಸದಸ್ಯತ್ವಕ್ಕೆ ₹900 ಶುಲ್ಕ ನಿಗದಿಪಡಿಸಲಾಗಿದೆ ಎಂದರು.*

*ಮಣಿಪಾಲ ಆರೋಗ್ಯ ಕಾರ್ಡ್ 2026 ನೋಂದಣಿಯು ನಮ್ಮ ಅಧಿಕೃತ ಪ್ರತಿನಿಧಿಗಳ ಮೂಲಕ ಮತ್ತು ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ಮಾಹಿತಿ ಕೇಂದ್ರಗಳಲ್ಲಿ ಲಭ್ಯವಿದೆ. ಅಥವಾ ನಾರಾಯಣ ನಾಯಕ್ – 9964684643, ಸೈಂಟ್ ಮಿಲಾಗ್ರೆಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿಮಿಟೆಡ್ ಕಾರ್ಕಳ ಮತ್ತು ಅದರ ಎಲ್ಲಾ ಶಾಖೆಗಳು – 8884414389, ಜನಹಿತ ಸೌಹಾರ್ದ ಸಹಕಾರಿ ಸಂಘ, ಕಾರ್ಕಳ ,988041149 ಸಂಪರ್ಕಿಸಿ ಕಾರ್ಡ್ ಪಡೆಯಬಹುದಾಗಿದೆ ಎಂದರು.*

*ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಲ್ಲಿ ತಜ್ಞ ವೈದ್ಯರ ಸಮಾಲೋಚನಾ ಶುಲ್ಕದಲ್ಲಿ ಶೇ.50, ಪ್ರಯೋಗಾಲಯ ಪರೀಕ್ಷೆಗಳಲ್ಲಿ ಶೇ.25 ಹಾಗೂ ರೇಡಿಯಾಲಜಿ ಸೇವೆಗಳಲ್ಲಿ ಶೇ.20ರಷ್ಟು ರಿಯಾಯಿತಿ ಸೇರಿದಂತೆ ಹಲವು ಸೌಲಭ್ಯಗಳನ್ನು ಕಾರ್ಡ್ ಸದಸ್ಯರು ಪಡೆಯಬಹುದಾಗಿದೆ. ಮಣಿಪಾಲ, ಉಡುಪಿ, ಕಾರ್ಕಳ, ಮಂಗಳೂರು, ಅತ್ತಾವರ ಹಾಗೂ ಕಟೀಲು ಸೇರಿದಂತೆ ಮಾಹೆ ಸಮೂಹ ಆಸ್ಪತ್ರೆಗಳು, ಮಣಿಪಾಲ ದಂತ ಮತ್ತು ಆಯುರ್ವೇದ ಆಸ್ಪತ್ರೆಗಳಲ್ಲಿಯೂ ಕಾರ್ಡ್‌ನ ಪ್ರಯೋಜನ ಪಡೆಯಬಹುದು.*

**DAIJIWORLD**

**LINK:** https://share.google/p3dRuCcbzh6IEOK8I

# Kasturba Hospital celebrates childhood cancer survivors through 'Wings of Hope'




Eminent theatre and film actress and National Film Award winner Roopashree Vorkady, who was the chief guest, was felicitated during the event. Interacting warmly with the survivor children and their families, she lauded the exemplary work of Kasturba Hospital in caring for children battling cancer.

"The doctors and staff of Kasturba Hospital are doing truly commendable work in treating and caring for these young cancer patients. I earnestly request all parents and children to place their trust in the doctors and work hand in hand with them. I would also urge our survivor families to reach out to the children who are still undergoing treatment, spend time with them, and share their own experiences, for there is no greater source of strength for a child fighting cancer than to meet another who has walked the same path and emerged a winner," said Vorkady.

Speaking on behalf of all the survivors, Aishwarya, a survivor, and Shwetha, the mother of a survivor, said, "We do not have enough words to thank the entire team of the department of paediatric oncology and Kasturba Hospital, Manipal. The doctors, nurses, and caregivers stood by us like family through the most difficult days of our lives, and it is because of their tireless care and compassion that our children can smile today."

The programme was presided over by Dr Sudhakar Kantipudi, chief operating officer, teaching hospitals, MAHE, Manipal. "Every child who walks through our doors and emerges a survivor is a story of extraordinary courage, the courage of the child, the devotion of the family, and the tireless commitment of our clinical teams. 'Wings of Hope' is our way of celebrating these little heroes and reminding every family that they are not alone on this journey. MAHE and our Teaching Hospitals remain deeply committed to compassionate, world-class care for children with cancer," said Dr Kantipudi.

**DHRISHYA NEWS**

**LINK:** https://share.google/zgcuG1uPzXeMxf6U6

# ವಿಂಗ್ಸ್ ಆಫ್ ಹೋಪ್’: ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳನ್ನು ಸಂಭ್ರಮಿಸಿದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ




ಮಣಿಪಾಲ, ಸೆಪ್ಟೆಂಬರ್ 3: ಬಾಲ್ಯ ಕ್ಯಾನ್ಸರ್ ಜಾಗೃತಿ ಮಾಸವನ್ನು ಆಚರಿಸುವ ಅಂಗವಾಗಿ, ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಮಣಿಪಾಲದ ಮಕ್ಕಳ ಕ್ಯಾನ್ಸರ್ ವಿಭಾಗವು ‘ವಿಂಗ್ಸ್ ಆಫ್ ಹೋಪ್’ ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮವು ಮಂಗಳವಾರದಂದು ಮಣಿಪಾಲದ ಹಾವಂಜೆಯಲ್ಲಿರುವ ಮಣಿಪಾಲ ಹಾಸ್ಪೈಸ್ ಆ್ಯಂಡ್ ರೆಸ್ಪೈಟ್ ಸೆಂಟರ್ (MHRC)ನ ಸಭಾಂಗಣದಲ್ಲಿ ನಡೆಯಿತು.

‘ಭರವಸೆ, ಶಕ್ತಿ ಮತ್ತು ನಗು’ ಎಂಬ ಸಂದೇಶದೊಂದಿಗೆ ರೂಪುಗೊಂಡ ಈ ಕಾರ್ಯಕ್ರಮದಲ್ಲಿ ಸುಮಾರು 65 ಬಾಲ್ಯ ಕ್ಯಾನ್ಸರ್‌ನಿಂದ ಗುಣಮುಖರಾದ ಮಕ್ಕಳು ಹಾಗೂ ಅವರ ಪೋಷಕರು ಭಾಗವಹಿಸಿದ್ದರು. ಬಾಲ್ಯ ಕ್ಯಾನ್ಸರ್ ಜಾಗೃತಿಯ ಸಂಕೇತವಾದ ಚಿನ್ನದ ರಿಬ್ಬನ್ ಈ ಸಂದರ್ಭಕ್ಕೆ ವಿಶೇಷ ಮೆರುಗು ನೀಡಿತು; ರೋಗವನ್ನು ಎದುರಿಸಿ ಗೆದ್ದ ಈ ಪುಟ್ಟ ಧೀರ ಮಕ್ಕಳನ್ನು ಗೌರವಿಸಲಾಯಿತು.

ಖ್ಯಾತ ರಂಗಭೂಮಿ ಹಾಗೂ ಚಲನಚಿತ್ರ ನಟಿ, ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತೆ ರೂಪಶ್ರೀ ವರ್ಕಾಡಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟರು. ಗುಣಮುಖರಾದ ಮಕ್ಕಳು ಮತ್ತು ಅವರ ಕುಟುಂಬಗಳೊಂದಿಗೆ ಆತ್ಮೀಯವಾಗಿ ಬೆರೆತ ಅವರು, ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಮಕ್ಕಳ ಆರೈಕೆಯಲ್ಲಿ ಕಸ್ತೂರ್ಬಾ ಆಸ್ಪತ್ರೆ ಮಾಡುತ್ತಿರುವ ಶ್ಲಾಘನೀಯ ಕಾರ್ಯವನ್ನು ಪ್ರಶಂಸಿಸಿದರು.

## KEMMANNU NEWS

**LINK:** https://share.google/nuGTNZgy1RLpxnCZ0

**Kasturba Hospital's Care for Children Battling Cancer is Commendable: National Film Award-Winning Actress Roopshree Vorkadi**

Manipal, September 3: In a heart-warming reaffirmation of life beyond cancer, the Department of Paediatric Oncology, Kasturba Medical College and Hospital, Manipal, organized a special program titled "Wings of Hope" to observe Childhood Cancer Awareness Month. The program was held at the auditorium of the Manipal Hospice and Respite Center (MHRC), Havanje, Manipal, on Tuesday.




Conceived around the message of spreading Hope, Strength, and Smiles, the program brought together nearly 65 childhood cancer survivors and their parents for a morning filled with warmth, courage, and celebration. The golden ribbon, the universal symbol of childhood cancer awareness, set the tone for the occasion, honoring the little champions who have fought the disease and emerged victorious.

Eminent theatre and film actress and National Film Award winner Ms. Roopashree Vorkady, who was the chief guest, was felicitated during the event. Interacting warmly with the survivor children and their families, she lauded the exemplary work of Kasturba Hospital in caring for children battling cancer.

"The doctors and staff of Kasturba Hospital are doing truly commendable work in treating and caring for these young cancer patients. I earnestly request all parents and children to place their trust in the doctors and work hand in hand with them. I would also urge our survivor families to reach out to the children who are still undergoing treatment, spend time with them, and share their own experiences, for there is no greater source of strength for a child fighting cancer than to meet another who has walked the same path and emerged a winner," said Ms. Vorkady.